**ಸಾಕ್ಷಿಗೆ ದಿನಾಂಕ 24-01-2025ರಂದು ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ  ಎದುರುದಾರರ ಪರ ಶ್ರೀ ವಿ.ಸಿ.ಎಂ.ಪಿ. ವಕೀಲರಿಂದ</u>**

ನಾನು ಒಕ್ಕಲುತನ ಮಾಡುತ್ತೇನೆ. ನಮಗೆ ಸೇರಿದ ಸ್ವಂತ ಜಮೀನು ಇಲ್ಲ. ನನಗೆ ಪ್ರತಿ ತಿಂಗಳು ಒಕ್ಕಲುತನ ಕೆಲಸದಿಂದ 20 ರಿಂದ 25 ಸಾವಿರ ಆದಾಯ ಬರುತ್ತದೆ. ಕೂಲಿ ಕೆಲಸದಿಂದ  20 ರಿಂದ 25 ಸಾವಿರ ಆದಾಯ ಬರುತ್ತದೆ ಅಂತಾ ತೋರಿಸಲು ಯಾವುದೇ ದಾಖಲೆ ಇಲ್ಲ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದ ಸಮಯದಲ್ಲಿ ನನಗೆ 31 ರಿಂದ 32 ವರ್ಷ ವಯಸ್ಸಾಗಿರಬಹುದು. ನನ್ನ ವಯಸ್ಸನ್ನು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿಲ್ಲ. ನನಗೆ 40 ರಿಂದ 45 ವರ್ಷ ಮೇಲ್ಪಟ್ಟು ವಯಸ್ಸಾಗಿದೆ ಎಂದರೆ ಸರಿಯಲ್ಲ.

ಅಪಘಾತದ ದಿನದಂದು ನಾನು ಕರಕಳ್ಳಿ ಗ್ರಾಮಕ್ಕೆ ಕಾರ್ಯಕ್ರಮಕ್ಕಾಗಿ ಸುಮಾರು 4 ರಿಂದ 4 ½ ವರ್ಷಗಳ ಹಿಂದೆ ದ್ವಿ-ಚಕ್ರ ವಾಹನದ ಮೇಲೆ ಹೋಗುತ್ತಿದ್ದಾಗ ಅಪಘಾತವಾಗಿರುತ್ತದೆ. ದ್ವಿ-ಚಕ್ರ ವಾಹನದ ಮೇಲೆ ನಾನು ಮತ್ತು ಸಂತೋಷ ಹೋಗುತ್ತಿದ್ದೆವು. ದ್ವಿ-ಚಕ್ರ ವಾಹನವನ್ನು ಸಂತೋಷ ಚಾಲನೆ ಮಾಡುತ್ತಿದ್ದ. ಸದರಿ ಸಂತೋಷನಿಗೆ ದ್ವಿ-ಚಕ್ರ ವಾಹನ ಚಾಲನ ಪರವಾನಿಗೆ ಇತ್ತು . ಸಂತೋಷನ ದ್ವಿ-ಚಕ್ರ ವಾಹನ ಚಾಲನ ಪರವಾನಿಗೆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಂತೋಷನಿಗೆ ದ್ವಿ-ಚಕ್ರ ವಾಹನ ಚಾಲನ ಪರವಾನಿಗೆ ಹೊಂದಿರಲಿಲ್ಲ ಅದಕ್ಕೆ ಸದರಿ ಸಂತೋಷನ ವಾಹನ ಚಾಲನ ಪರವಾನಿಗೆ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

ನಾನು ಮತ್ತು ಸಂತೋಷ ಆ ದಿನ ಹೆಲ್ಮೇಟನ್ನು ಧರಿಸಿದ್ದೆವು. ಅಪಘಾತದ ದಿನದಂದು ನಾವು ಹೆಲ್ಮೇಟನ್ನು ಧರಿಸಿದ್ದೆವು ಅಂತಾ ದೂರಿನಲ್ಲಾಗಲೀ ದೋಷಾರೋಪಣೆ ಪಟ್ಟಿಯಲ್ಲಿ ನಮೂದಿಸಿಲ್ಲ ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೆಲ್ಮೇಟನ್ನು ಧರಿಸಿದ್ದೆವು ಅಂತಾ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಾವು ಯಡ್ರಾಮಿ ಕಡೆಯಿಂದ ಕರ್ಕಳ್ಳಿ ಕಡೆಗೆ ಹೋಗುತ್ತಿದ್ದಾಗ ಸೊನ್ನ ಕ್ರಾಸ್ ಹತ್ತಿರ ಮುಂದಿನಿಂದ ಸ್ಪ್ಲೆಂಡರ್ ವಾಹನ ಚಾಲಕ ತಿರುವು ತೆಗೆದುಕೊಳ್ಳಲು ಹೋಗಿ ನಮಗೆ ಗುದ್ದಿರುತ್ತಾನೆ. 1ನೇ ಎದುರುದಾರನ ವಾಹನ ಸಂ.ಕೆಎ-32 ಇಯು-9476 ವಾಹನದ ಚಾಲಕನ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ.

ಸಂತೋಷನಿಗೆ ವಾಹನ ಚಾಲನಾ ಪರವಾನಿಗೆ ಪತ್ರ ಹೊಂದಿರಲಿಲ್ಲ ಅದಕ್ಕೆ ಆತನಿಗೆ ವಾಹನ ಚಾಲನೆ ಮಾಡಲು ಬಾರದೆ ಇರುವ ಕಾರಣ ಆತನ ತಪ್ಪಿ ನಿಂದಲೇ ಅಪಘಾತವಾಗಿರುತ್ತದೆಂದರೆ ಸರಿಯಲ್ಲ. 1ನೇ ಎದುರುದಾರನ ವಾಹನದ ಚಾಲಕನ ತಪ್ಪಿ ನಿಂದ ಅಪಘಾತವಾಗಿರುತ್ತದೆ ಎಂದು ಸುಳ್ಳು ದಾಖಲೆ ಸೃಷ್ಠಿಸಿ ಸುಳ್ಳು ಕೇಸ್ ದಾಖಲು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನ್ನ ಬಲಗಾಲು ಮುರಿದಿದ್ದು ನನ್ನ ಬಲಗಾಲಿನಲ್ಲಿ ರಾಡ್ ಇದೆ.

ಅಪಘಾತದಲ್ಲಿ ನನ್ನ ತಲೆಗೆ ಸಹ ಗಾಯವಾಗಿದ್ದು 15 ದಿನಗಳ ನಂತರ ತಲೆ ಸುತ್ತು ಬಂದ ಹಾಗೆ ಆಗುತ್ತಿದ್ದ ಕಾರಣ ಕೊಲ್ಲಾಪೂರ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಲಾಗಿರುತ್ತದೆ. ಅಪಘಾತವಾದ ನಂತರ ಮೊದಲಿಗೆ ಯಡ್ರಾಮಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದು ಅದಾದ ನಂತರ ಕಲ್ಬುರ್ಗಿಯ ಕುರಾಳ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಕುರಾಳ ಆಸ್ಪತ್ರೆಯಲ್ಲಿ 15 ದಿನಗಳವರೆಗೆ ದಾಖಲಾಗಿದ್ದೆ. ಕುರಾಳ ಆಸ್ಪತ್ರೆಯಿಂದ ಬಿಡುಗಡೆ ಆದ ನಂತರ ಮನೆಗೆ ಬಂದಿರುತ್ತೇನೆ. ಚಿಕಿತ್ಸೆಗಾಗಿ ಮೂರೂವರೆ ಲಕ್ಷ ಹಣ ಖರ್ಚು ಮಾಡಿರುತ್ತೇನೆ. ಸದರಿ ಹಣವನ್ನು ತೀರಿಸುವ ಸಲುವಾಗಿ ಈಗ ಮನೆ ಮಾರುವ ಪರಿಸ್ಥಿತಿ ಬಂದಿದೆ. ಸಾಲ ಪಡೆದುಕೊಂಡ ಬಗ್ಗೆ ದಾಖಲೆ ಇದೆ ಆದರೆ ಸಾಲ ಪಡೆದ ಬಗ್ಗೆ ಬಾಂಡ್ ಸಾಲ ಕೊಟ್ಟವರ ಬಳಿ ಇದೆ. ಸದರಿ ಬಾಂಡ್ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಚಿಕಿತ್ಸೆಗಾಗಿ ಸಾಲ ಮಾಡಿ ಆಸ್ಪತ್ರೆ ಹಾಗೂ ವೈದ್ಯಕೀಯ ಬಿಲ್ ಪಾವತಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ-14 ಮತ್ತು 15 ರ ಮೇಲೆ ರೋಗಿ ಸಂಖ್ಯೆ ಬರೆದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆಸ್ಪತ್ರೆಯವರು ಕಂಪ್ಯೂಟರ್ ಬಿಲ್ ನೀಡುತ್ತಾರೆ ಕೈಯಿಂದ ಬರೆದ ಬಿಲ್ ನೀಡಲ್ಲ ಎಂದರೆ ಸಾಕ್ಷಿ ಆಸ್ಪತ್ರೆಯವರು ನೀಡಿರುವ ಬಿಲ್ಲನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆಂದು ನುಡಿಯುತ್ತಾರೆ. ಸದರಿ ನಿಪಿ-14 ಮತ್ತು 15 ರ ದಾಖಲೆಗಳನ್ನು ನಮಗೆ ಬೇಕಾದ ಹಾಗೆ ಬರೆಯಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ನೀಡಿದ ಹಾಗೆ ಬಿಲ್ ನೀಡಿರುತ್ತಾರೆಂದು ನುಡಿಯುತ್ತಾರೆ. ನಿಪಿ-14 ಮತುತ 15 ರ ಬಿಲ್ ಅಂತಿಮ ಬಿಲ್ ಅಲ್ಲ ಅದು ಕ್ಯಾಶ್ ಮೆಮೊ ದಾಖಲೆ ಎಂದರೆ ಸಾಕ್ಷಿ ನಾವು ನೀಡಿದ ಹಾಗೆ ಬಿಲ್ ನೀಡಿರುತ್ತಾರೆಂದು ನುಡಿಯುತ್ತಾರೆ.  ನಿಪಿ-14, 15 ಹಾಗೂ ಇತರೆ ಆಸ್ಪತ್ರೆ ಹಾಗೂ ವೈದ್ಯಕೀಯ ಬಿಲ್ ಗಳನ್ನು ಸೃಷ್ಟಿಸಿಕೊಂಡು ಪ್ರಕರಣಕ್ಕೆ ಅನುಕೂಲವಾಗಲೆಂದು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತವಾಗಿ 5 ವರ್ಷವಾಗಿದ್ದು ನನ್ನ ಆಗಿರುವಂತಹ ಗಾಯಗಳು ವಾಸಿಯಾಗಿವೆ ಎಂದರೆ ಸಾಕ್ಷಿ ಕಟಕಟೆಯಿಂದ ಹೊರಗೆ ಬಂದು ತನ್ನ ಕಾಲನ್ನು ತೋರಿಸಿ ಅದರಲ್ಲಿ ರಾಡನ್ನು ಅಳವಡಿಸಿ ಕೀವು ಬರುತ್ತಿತ್ತು ಎಂದು ನುಡಿಯುತ್ತಾರೆ. ನನ್ನ ಕಾಲಿಗೆ ಅಳವಡಿಸಿದಂತಹ ರಾಡನ್ನು ಸೀಮಿತಾವಧಿಯಲ್ಲಿ ತೆಗೆಸಬೇಕಾಗಿದ್ದು ಸದರಿ ರಾಡನ್ನು ತೆಗೆಯಿಸದ ಕಾರಣ ನನಗೆ ತೊಂದರೆ ಆಗುತ್ತಿದೆ ಎಂದರೆ ಸಾಕ್ಷಿ ನಾನು ಮೊದಲು ಪಡೆದುಕೊಂಡ ಸಾಲವೇ ತೀರಿಸಲು ಆಗಿಲ್ಲ ಅದಕ್ಕಾಗಿ ರಾಡನ್ನು ತೆಗೆಸಿಲ್ಲ ಎಂದು ನುಡಿಯುತ್ತಾರೆ.

ಸರಕಾರಿ ಆಸ್ಪತ್ರೆಯಲ್ಲಿ ಕಾಲಿನಲ್ಲಿರುವ ರಾಡನ್ನು ತೆಗೆಸಬಹುದು ಎಂದರೆ ಸಾಕ್ಷಿ ಸರಕಾರಿ ಆಸ್ಪತ್ರೆಯಲ್ಲಿ ತೆಗೆಯಿಸಬಹುದು ಆದರೆ ನಮಗೆ ದುಡಿದು ತಂದು ಹಾಕುವವರು ಯಾರೂ ಇಲ್ಲ ಎಂದು ನುಡಿಯುತ್ತಾರೆ. ಪುನಃ ಸಾಕ್ಷಿ ನಾನು ಕುರಿ ಹಾಗೂ ದನ ಕಾಯಲು ಹೋಗುತ್ತೇನೆಂದು ನುಡಿಯುತ್ತಾರೆ. ನಿಪಿ-9 ರ ಅಂಗನ್ಯೂನ್ಯತಾ ದಾಖಲೆ ಸುಳ್ಳಾಗಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

ನಿಪಿ-9 ರ ಅಂಗನ್ಯೂನ್ಯತಾ ಪ್ರಮಾಣ ಪತ್ರ ಸಹ 2022 ನೇ ಸಾಲಿನದ್ದಾಗಿದ್ದು ಈ ಪ್ರಸ್ತುತವಾಗಿ ನನಗೆ ಅಂಗನ್ಯೂನ್ಯತೆ ಇರುವ ದಾಖಲಾತಿ ಸಲ್ಲಿಸಿಲ್ಲ ಎಂದರೆ ಸಾಕ್ಷಿ ಈಗ ನಾನು ತೋರಿಸಿಲ್ಲ ಎಂದು ನುಡಿಯುತ್ತಾರೆ. ನನಗೆ ಯಾವುದೇ ಅಂಗನ್ಯೂನ್ಯತೆ ಇಲ್ಲ ಮೊದಲಿನ ಹಾಗೆ ಕೆಲಸ ಮಾಡಬಲ್ಲೆ ಎಂದರೆ ಸರಿಯಲ್ಲ. ನಾನು ಅರ್ಜಿಯಲ್ಲಿ ಕೇಳಿರುವಂತಹ ಪರಿಹಾರ ಹಣಕ್ಕೆ ಯಾವುದೇ ಆಧಾರ ಇಲ್ಲ ಅಂದಾಜಿನ ಮೇಲೆ ಕೇಳಿರುತ್ತೇನೆಂದರೆ ಸರಿಯಲ್ಲ. 1ನೇ ಎದುರುದಾರ ಸಿದ್ದಪ್ಪನ ವಾಹನದ ಮೇಲೆ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,ಜೇವರ್ಗಿ